೩) ದೂರಂಗಳಲ್ಲಿ ಒಳಗೊಂಡಿರುವ ಮೊತ್ತ ಹಾಗೂ ವ್ಯಕ್ತಿಗಳನ್ನು ನಿರ್ದಿಷ್ಟವಾಗಿ ನಮೂದಿಸಿರುವುದಿಲ್ಲವಾದ್ದರಿಂದ ಈ ಪ್ರಶ್ನೆಗೆ ಸಮಂಜಸವಾದ ಉತ್ತರ ನೀಡಲು ಸಾಧ್ಯವಿಲ್ಲ,

ಈ) ೧) ತೀರ್ಮಾನಿಸಿದ ದೂರುಗಳು — ೯೦

೨) ನಿರಾಕರಿಸಿದ ದೂರುಗಳು — ೧೩೪೩

೩) ಬಾಕಿ ಇರುವ ದೂರುಗಳು — ೧೯೯

ತಪ್ಪಿತಸ್ಥರ ಮೇಲೆ ಶಿಸ್ತಿನ ಕ್ರಮ ಕೈಗೆದುಕೊಳ್ಳಲಾಗುತ್ತಿದೆ

ಉ) ೧) ಒಂದು

ಊ) ಸರ್ಕಾರವು ೨೨ ದೂರುಗಳನ್ನು ಲೋಕಾಯುಕ್ತರ ತೀರ್ಮಾನಕ್ಕೆ ನೀಡಿದ್ದು, ಪ್ರಥಮ ವಿಚಾರಣೆ ನಂತರ ೧೦ ದೂರುಗಳನ್ನು ನಿಯಮದ ಪ್ರಕಾರ ಪರಿಶೀಲಿಸಿ ಕಡತಗೊಳಿಸಲಾಗಿದೆ. ಬಾಕಿ ದೂರುಗಳ ಬಗ್ಗೆ ನಿಯಮದ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ಕರ್ನಾಟಕ ಮಹಾರಾಷ್ಟ್ರ ಗಡಿ ವಿಷಯದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ನಡೆದಂತಹ ಘಟನೆಗಳ ಬಗ್ಗೆ

೯೭. ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಸಂಕೇಶ್ವರದಲ್ಲಿ ನಡೆದಂತಹ ಘಟನೆಯ ಬಗ್ಗೆ ಪತ್ರಿಕೆಯಲ್ಲಿ ಬಂದ ವರದಿಯ ವಿಷಯವಾಗಿ ತಪ್ಪಿತಸ್ಥರ ಮೇಲೆ ಕೈಗೊಂಡ ಕ್ರಮವೇನು ?

(ಆ) ಕೆಲವೇ ದಿನಗಳ ನಂತರ ಬೆಳಗಾವಿಯಲ್ಲಿ ಬೇರೆ ರಾಜ್ಯಗಳಿಂದ ರಾಜಕೀಯ ಮುಖಂಡರು ಬಂದು ಕಾನೂನನ್ನು ಉಲ್ಲಂಘನೆ ಮಾಡಿ ಬಂಧಿತಸ್ಥರಾದವರ ಹೆಸರುಗಳೇನು ಹಾಗೂ ಅವರ ಮೇಲೆ ಎಗದುಕೊಂಡ ಕಾನೂನಿನ ಕ್ರಮವೇನು ?

(ಇ) ಇತ್ತೀಚೆಗೆ ಬೆಳಗಾವಿ ಹಾಗೂ ಜಿಲ್ಲೆಯಲ್ಲಿನ ಇತರ ನಗರಗಳಲ್ಲಿ ನಡೆದ ಗಲಭೆಗಳಲ್ಲಿ ಸರ್ಕಾರದ ಹಾಗೂ ಖಾಸಗಿಯವರ ಆಸ್ತಿ ಪಾಸ್ತಿಗಳಿಗೆ ಉಂಟಾದ ನಷ್ಟವೆಷ್ಟು (ವಿವರಗಳನ್ನು ಒದಗಿಸುವುದು)

(ಈ) ಗಡಿ ಭಾಗದಲ್ಲಿ ಕನ್ನಡಿಗರ ಹಾಗೂ ಮರಾಠಿಗರ ಪೂರ್ಣಕಾಲದ ಬಾಂಧವ್ಯವನ್ನು ರಾಜಕೀಯವಾಗಿ ಗೊಂದಲ ಮಾಡುತ್ತಿರುವ ಸಮಾಜ ಕಂಟಕರನ್ನು ತಡೆಗಟ್ಟಲು ಇನ್ನು ಮುಂದೆ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು ಸರ್ಕಾರದ ಪರಿಶೀಲನೆಯಲ್ಲಿದ್ದು ಅವರ ವಿವರವೇನು ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

(ಅ) ಶ್ರೀಯುತರುಗಳಾದ ಕಿರಣ್ ಠಾಕೂರ್, ಅಶೋಕ ಎಲ್ಗಿ, ಉತ್ತಮ ಪಾಂಡುರಂಗ ಭಿಸೆ, ಮತ್ತು ಆನಂದ ಶಂಕರ ಶಿಂಧೆ ಅಪರಾಧಿಗಳ ಮೇಲೆ ಬೆಳಗಾವಿಯ ಪಿಡೇ ಬಜಾರ್ ಪೋಲೀಸು ಠಾಣೆ ಅಪರಾಧ ಸಂ. ೮೫೫/೮೬ ಕಲಂ ೧೫೫(ಎ) ಭಾರತ ದಂಡ ಸಂಹಿತೆ ಮತ್ತು ಸಂಕೇಶ್ವರ ಪೋಲೀಸು ಠಾಣಾ ಅಪರಾಧ ಸಂ ೭೧/೮೬ ಕಲಂ ೧೫೫(ಎ) ಭಾ.ದಂ.ಸಂ ಪ್ರಕಾರ ಪ್ರಕರಣಗಳನ್ನು ದಾಖಲು ಮಾಡಿಕೊಂಡು ತನಿಖೆ ನಡೆಸಲಾಗಿದೆ. ಈ ಅಪರಾಧಿಗಳನ್ನು ಫಿರ್ಯಾದು ಮಾಡಲು ಸರ್ಕಾರದ ಅನುಮತಿಯನ್ನು ಕೊಡಲಾಗಿದೆ.

(ಆ) ಶ್ರೀಯುತರುಗಳಾದ ಶರದ್ ಪವಾರ್, ಎಸ್. ಎಂ. ಜೋಶಿ, ಸುರೇಶ್ ಕಲ್ಮಾಡಿ, ಪ್ರೊ. ಎಸ್. ಡಿ. ಪಾಟೀಲ್, ಚಗನ್ ಚಂದ್ರಕಾಂತ ಭುಜಬಲ್, ನಿಪಲ್ ಅಪಮ್ಮಿದ್, ದತ್ತಾ ಎಕಬೋಟೆ, ಸುರೇಶ್ ದತ್ತಾತ್ರೇಯ ಜೋಶಿ, ಆರ್. ಆರ್. ಸಬಿನೀಸ್, ಆರ್. ಎಸ್. ಗವಾಯಿ, ಡಾ. ಪಿ. ಎಸ್. ಪೈ, ಇನ್ನೂ ಮುಂತಾದವರುಗಳು ಮಹಾರಾಷ್ಟ್ರದ ರಾಜಕೀಯ ಮುಖಂಡರು. ಇವರ ಮೇಲೆ ಒಟ್ಟು ೧೩೨ ಮೊಕದ್ದಮೆಗಳನ್ನು ಕಾನೂನು ಬಾಹಿರ ಸಭೆ, ಕೊಲೆ ಯತ್ನ, ಮತ್ತು ಪ್ರತಿಬಂಧಕಾಜ್ಞೆಯ ಉಲ್ಲಂಘನೆ ಮಾಡಿದ್ದಕ್ಕೆ ದಾಖಲು ಮಾಡಿಕೊಳ್ಳಲಾಗಿದೆ.

(ಇ) ಒಟ್ಟು ನಷ್ಟದ ಆಸ್ತಿ ಸಂಖ್ಯಾರು ರೂ. ೭೪,೨೬,೮೬೦–೦೦. ಇದರಲ್ಲಿ ಖಾಸಗಿ ಆಸ್ತಿ ರೂ. ೩೧ ೨೩,೧೦೦–೦೦ ಹಾಗೂ ಸಾರ್ವಜನಿಕ ಆಸ್ತಿ ರೂ. ೪೩,೮೩ ೭೬೦–೦೦ (ವಿವರಗಳನ್ನು ಇದಕ್ಕೆ ಲಗತ್ತಿಸಿದ ಅನುಬಂಧದಲ್ಲಿ ತೋರಿಸಲಾಗಿದೆ).

(ಈ) ಘಟನೆಗೆ ಕಾರಣರಾದ ಸಮಾಜ ಕಂಟಕರನ್ನು ಪತ್ತೆ ಹಚ್ಚಲಾಗಿದ್ದು ಆದರಿಂದ ಮುಂದೆ ಬರಬಹುದಾದ ತೊಂದರೆಗಳನ್ನು ನಿವಾರಿಸಲು ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳಲಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ ನಡೆದ ಗಲಭೆಯಲ್ಲಿ ಹಾನಿ/ನಷ್ಟಕ್ಕೊಳಗಾದ ಸಾರ್ವಜನಿಕ/ಖಾಸಗಿ ಆಸ್ತಿ ಪಾಸ್ತಿಗಳ ವಿವರಗಳ ತಖ್ತೆ.

ಅನುಬಂಧ

ಸಾರ್ವಜನಿಕ ಆಸ್ತಿ

	ವಿವರ	ಹಾನಿ	ಬೆಂಕಿ ಹಚ್ಚಿದ್ದು	ಒಟ್ಟು ನಷ್ಟ
	೧	೨	೩	೪
೧	ಕನ್ನಡ ಶಾಲೆಗಳು (ಮುತ್ತಗಾ, ಮಡಗಾವ್, ಸಿಂಧೋಲಿ, ನಿಪ್ಪಾಣಿ, ನಂದಗಡ. ಹಿಂದಲ್ಗಾ)	೩ ರೂ. ೨,೪೭೫ (ಒಟ್ಟು ಪ್ರಕರಣ ೧೭)	೧೨ (ಬೆಂಕಿ ಹಚ್ಚಲಾಗಿ ಪ್ರಯತ್ನಿಸಿದ್ದು ೨) ರೂ ೯೦,೨೪೦	ರೂ ೯೨,೧೫–೦೦
೨	ಮರಾಠಿ ಶಾಲೆಗಳು (ಹಂಸಿ, ಶಹಾಪುರ ಸಾಂತಿ, ಬೆಸ್ತವಾಡ್)	೨ ರೂ ೪,೦೨೦ (ಒಟ್ಟು ಪ್ರಕರಣ ೩)	೧ ರೂ ೧,೧೧. ೨೦೦	ರೂ. ೧೧೫೨೦೦–೦೦
೩	ಕ.ರಾ.ರ.ಸಾ. ಸಂಸ್ಥೆ ಬಸ್ಸುಗಳು	೧೬ ರೂ ೨೬,೯೦೦	೫ ರೂ ೬,೮೩,೮೯೦	ರೂ ೭,೧೦,೭೯೦
೪	ಎಂ.ಎಸ್.ಆರ್.ಟಿ.ಸಿ. ಬಸ್, ಬಾಗೇವಾಡಿ		೧ ರೂ ೧,೨೦,೦೦೦	ರೂ ೧,೫೦,೦೦೦
೫	ಪೋಲೀಸು ವಾಹನಗಳು	೯ ರೂ ೫೬,೦೦೦ (ಒಟ್ಟು ೧೦ ವಾಹನಗಳು)	೧ ರೂ ೭೦,೦೦೦	ರೂ ೧. ೬,೦೦೦
೬	ಅಗ್ನಿ ಶಾಮಕ	ರೂ ೧೨,೬೦೦		ರೂ ೧೨,೬೦೦
೭	ಸರ್ಕಾರಿ ಕಟ್ಟಡಗಳು (ಎಪಿಎಂಸಿ, ಮುನಿಸಿಪಾಲ್ ನಾಕ, ಟೆಲಿಫೋನ್ ಭೂತ್‌ಗಳು ಗಳು, ರೈತ ಭವನ ನಿರೀಕ್ಷಣಾ ಬಂಗಲೆ, ರಕ್ಕಸಕೊಪ್ಪ, ಮಿನಿ ಗಾರಿಕೆ ಕಛೇರಿ, ಪಂಪ್‌ಹೌಸ್, ಇತ್ಯಾದಿ, ಬೆಳಗಾವಿ ತಾಲೂಕಿನಲ್ಲಿ. ನಿಪ್ಪಾಣಿಯಲ್ಲಿ ಅಂಚೆ ಕಛೇರಿ, ಸಿಟಿ ಸರ್ವೆ ಕಛೇರಿ, ಮುನಿಸಿಪಲ್ ಕಛೇರಿ, ಯೂನಿಯನ್ ಬ್ಯಾಂಕ್ ಇತ್ಯಾದಿ.	ರೂ ೧೦,೩೫೦	ರೂ ೧೧,೬೦,೮೦೫ (ಒಟ್ಟು ೩೦ ಕಟ್ಟಡಗಳು)	ರೂ. ೧೧,೭೧,೧೫೫

೧	೨	೩	೪
೮ ಸರ್ಕಾರಿ ಆಸ್ತಿಗಳು (ಅರಣ್ಯ ಮರದ ಡಿಪೋ, ದೇವಮಾನಿ ನೀರಿನ ಕೊಳವೆ, ಮುಂತಾದವು)	೯	೩ (ಒಟ್ಟು ಪ್ರಕರಣ ೧೨) ರೂ ೧೩,೫೪,೮೦೦. ರೂ ೫,೭೦,೫೦೦	ರೂ ೧೯,೫೫,೩೦೦
			ರೂ ೪೩,೭೩,೭೬೦

ವಾಸಗಿ ಆಸ್ತಿಗಳು

೧	ವಾಸಗಿ ವಾಹನಗಳು (೩ ಟೆಂಪೋ, ೧ ಲಾರಿ, ೧ ಟ್ರಾಕ್ಟರ್, ೧ ಜೀಪು, ೧ ಕಾರು)	೧ ರೂ ೮೦೨	೬ ಪ್ರಯತ್ನ–೧ ರೂ ೩,೨೧,೦೫೦ (ಒಟ್ಟು ಪ್ರಕರಣಗಳು ೭)	ರೂ ೩,೨೧,೮೫೦
೨	ತುಂಬಿದ ಲಾರಿ ೧ ಘಟ್ಟಿ ಮತ್ತು ಪಾಟೀಲ್, ಮಹಾರಾಷ್ಟ್ರ ಇವರಿಗೆ ಸೇರಿದ್ದು		೧ ರೂ ೨೫,೦೦,೦೦೦	ರೂ ೨೫,೦೦ ೦೦೦
೩	ವಾಸಗಿ ಕಟ್ಟಡಗಳು (ಸಂಕೇಶ್ವರ, ನಿಪ್ಪಾಣಿ, ಬೆಳಗಾವಿ ನಗರ, ಮತ್ತು ತಾಲ್ಲೂಕು)	೧೯ ರೂ ೫೪೪,೮೦೦	೬ ರೂ ೨,೪೬,೫೫೦ (ಒಟ್ಟು ಕಟ್ಟಡಗಳು ೨೬)	ರೂ ೩,೦೧,೨೫೦
			ಒಟ್ಟು ರೂ	೩೧ ೨೩,೧೦೦
			ಸಾರ್ವಜನಿಕ ಆಸ್ತಿ	ರೂ ೪೩,೦೩,೭೬೦–೦೦
			ವಾಸಗಿ ಆಸ್ತಿ	ರೂ ೩೧,೨೩,೧೦೦–೦೦
			ಒಟ್ಟು ರೂ	೭೪,೭೬,೮೬೦–೦೦

ಸಂಕ್ಲ ತಾಲ್ಲೂಕಿನ ಬೆಳ್ಳಾರೆಗೆ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಮಂಜೂರಾತಿಯ ಬಗ್ಗೆ

೪೫೫. ಶ್ರೀ ಕೆ. ಕಂಶಾಲ (ಸುಳ್ಳ).—ಮಾನ್ಯ ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಸಂಕ್ಲ ತಾಲ್ಲೂಕಿನ ಬೆಳ್ಳಾರೆಗೆ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡುವಂತೆ ಕಳೆದ ಎರಡು ವರ್ಷಗಳಿಂದ ಕೇಳಿಕೊಳ್ಳಲಾಗಿತ್ತೆ ?

(ಆ) ಹಾಗಿದ್ದಲ್ಲಿ ಸದರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಯಾವಾಗ ಮಂಜೂರಾತಿ ನೀಡಲಾಗುವುದು ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

(ಅ) ಇಲ್ಲ.

(ಆ) ಉದ್ಭವಿಸುವುದಿಲ್ಲ.